ಬಿಡುಗಡೆ ಮಾಡಿದ ಹಣವೆಷ್ಟು ? ಹೆಚ್ಚಿನ ಹಣ ಬಿಡುಗಡೆಗೆ ಕೋರಿ ಬರೆದ ಪತ್ರದ ಬಗ್ಗೆ ಸರ್ಕಾರದ ನಿಲುವೇನು ?

ಇ) *ಈ ಕಾಮಗಾರಿಯಲ್ಲಿ ಬರುವ ಎರಡು ಸೇತುವೆಗಳ ಕಾಮಗಾರಿ ಬಗ್ಗೆ ಟೆಂಡರು ಕರೆಯಲಾಗಿದೆಯೆ; ಕರೆಯದಿದ್ದಲ್ಲಿ ವಿಳಂಬಕ್ಕೆ ಕಾರಣವೇನು ?*

ಶ್ರೀ ಶಿವಾನಂದ ಹೆಚ್. ಕೌಜಲಗಿ (ಲೋಕೋಪಯೋಗಿ ಸಚಿವರು) :

ಅ) ಪುತ್ತೂರು ಬೈಪಾಸ್ ರಸ್ತೆಯಲ್ಲಿ 2ನೇ ಸೇತುವೆಯ ಹಾಗೂ ನ್ಯಾಯಾಲಯದಲ್ಲಿ ತೀರ್ಮಾನವಾಗಬೇಕಾಗಿರುವ ಭೂಸ್ವಾಧೀನವಾಗಿ ಬೇಕಾಗಿರುವ ಸುಮಾರು 50 ಮೀಟರ್ ಉದ್ದದ ಭಾಗದ ಕಾಮಗಾರಿಯನ್ನು ಹೊರತುಪಡಿಸಿ, ಉಳಿದ ಭಾಗದ ಕೆಲಸದ ಕಾಮಗಾರಿಯು ಮುಕ್ತಾಯದ ಹಂತದಲ್ಲಿದೆ.

ಆ) ತಾಂತ್ರಿಕ ಮಂಜೂರಾತಿಯಾದ ಅಂದಾಜು 85.00 ಲಕ್ಷ ರೂ.ಗಳಾಗುತ್ತದೆ. ಇದುವರೆವಿಗೆ 33.00 ಲಕ್ಷ ರೂ.ಗಳು ವೆಚ್ಚವಾಗಿರುತ್ತದೆ. ಪ್ರಸಕ್ತ ಸಾಲಿನಲ್ಲಿ 10.85 ಲಕ್ಷ ರೂ.ಗಳನ್ನು ವೆಚ್ಚ ಮಾಡಲಾಗಿದೆ. ಈ ಕಾಮಗಾರಿ ಪೂರ್ತಿ ಆಗಲು ಇನ್ನೂ ಸುಮಾರು 52.00 ಲಕ್ಷ ರೂ.ಗಳು ಅಗತ್ಯವಿದೆ. ಕಾಮಗಾರಿಯನ್ನು 1996-97ನೇ ಸಾಲಿನಲ್ಲಿ ಪೂರ್ತಿಗೊಳಿಸುವ ಕಾರ್ಯಕ್ರಮವಿರುತ್ತದೆ. ಆದ್ದರಿಂದ, ನಿಗಧಿತ ಸಮಯಕ್ಕೆ ಕಾಮಗಾರಿ ಮುಗಿಸುವುದಕ್ಕೆ ಹಣದ ಲಭ್ಯತೆಯನ್ನು ಅನುಸರಿಸಿ, ಅನುದಾನದ ವ್ಯವಸ್ಥೆಯನ್ನು ಮಾಡಲಾಗುವುದು.

ಇ) ಈ ಕಾಮಗಾರಿಯಲ್ಲಿ ಬರುವ ಸೇತುವೆ ಕಾಮಗಾರಿಗಳಿಗೆ ಈಗಾಗಲೇ ಟೆಂಡರು ಕರೆಯಲಾಗಿದೆ. (19.10.1995 ಗುತ್ತಿಗೆ ಸ್ವೀಕರಿಸುವ ದಿನಾಂಕ).

ಬಂಜಾರು ತಾಂಡಾಗಳ ವಿದ್ಯುದೀಕರಣ

356 - ಶ್ರೀ ರಾಜ ವೆಂಕಟಪ್ಪ ನಾಯಕ್ (ಸೋಲಾಪುರ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) *ಸೋಲಾಪುರ ತಾಲ್ಲೂಕಿನಲ್ಲಿ ವಿದ್ಯುದ್ದೀಕರಣವಾಗದೆ ಉಳಿದಿರುವ ಬಂಜಾರ ತಾಂಡಗಳ ಸಂಖ್ಯೆ ಎಷ್ಟು ?*

ಆ) *ವಿದ್ಯುದ್ದೀಕರಣವಾಗದಿರುವುದಕ್ಕೆ ಕಾರಣವೇನು ?*

ಇ) *ಅವುಗಳನ್ನು ಯಾವಾಗ ವಿದ್ಯುದೀಕರಣಗೊಳಿಸಲಾಗುವುದು.*

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) :

ಅ) 8 (ಎಂಟು).

ಆ) ಪ್ರತಿ ವರ್ಷದ ನಿಗದಿತ ಗುರಿಯಂತೆ, ಸೋಲಾಪುರ ತಾಲ್ಲೂಕಿನಲ್ಲಿ ವಿದ್ಯುದ್ದೀಕರಣವಾಗದೇ

ಉಳಿದಿರುವ ತಾಂಡಾಗಳನ್ನು ಹಂತ ಹಂತವಾಗಿ ವಿದ್ಯುದ್ದೀಕರಿಸಲಾಗುತ್ತಿದೆ. 34 ತಾಂಡಾಗಳ ಪೈಕಿ, ಆಗಸ್ಟ್ 95ರ ಅಂತ್ಯದ ವರೆಗೆ 26 ತಾಂಡಾಗಳನ್ನು ವಿದ್ಯುದೀಕರರಿಸಲಾಗಿದ್ದು, ಕೇವಲ 8 ತಾಂಡಾಗಳು ಮಾತ್ರ ವಿದ್ಯುದೀಕರಣಕ್ಕಾಗಿ ಬಾಕಿ ಉಳಿದಿದೆ.

ಇ) ಮಾರ್ಚ 96ರ ಅಂತ್ಯದ ವೇಳೆಗೆ ಉಳಿದಿರುವ 8 ತಾಂಡಾಗಳನ್ನು ವಿದ್ಯುದೀಕರಣಗೊಳಿಸಲು ಉದ್ದೇಶಿಸಲಾಗಿದೆ.

ತುರುವೇಕೆರೆ ತಾಲ್ಲೂಕಿನ ರಸ್ತೆಗಳು

357 - ಶ್ರೀ ಹೆಚ್.ಬಿ. ನಂಜೇಗೌಡ (ತುರುವೇಕೆರೆ) : ಮಾನ್ಯ ಲೋಕೋಪಯೋಗಿ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುರುವೆಕೆರೆ ತಾಲ್ಲೂಕಿನಲ್ಲಿ ಲೋಕೋಪಯೋಗಿ ಇಲಾಖೆಯಿಂದ ನಿರ್ವಹಿಸುತ್ತಿರುವ ರಸ್ತೆಗಳು ಸಂಚಾರಕ್ಕೆ ಯೋಗ್ಯವಾಗಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಪ್ರಸಕ್ತ ಸಾಲಿನಲ್ಲಿ ಸದರಿ ರಸ್ತೆಗಳ ದುರಸ್ತಿಗಾಗಿ ತೆಗೆದುಕೊಂಡಿರುವ ಕ್ರಮಗಳೇನು;

ಇ) ಶ್ರೀರಂಗಪ್ಪಣ-ಬಿದರ್ ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಪರಿವರ್ತಿಸುವ ಯೋಜನೆ ಇದೆಯೇ?

ಶ್ರೀ ಶಿವನಂದಾ ಹೆಚ್. ಕೌಜಲಗಿ (ಲೋಕೋಪಯೋಗಿ ಸಚಿವರು) :

ಅ) ತುರುವೇಕೆರೆ ತಾಲ್ಲೂಕಿನಲ್ಲಿ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯ ರಸ್ತೆ ಕೆಲವು ಭಾಗಗಳು ಕೆಟ್ಟಿದ್ದು ಸುಗಮ ವಾಹನ ಸಂಚಾರಕ್ಕೆ ತೊಂದರೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) 1995-96ನೇ ಸಾಲಿನಲ್ಲಿ ತುರುವೇಕೆರೆ ತಾಲ್ಲೂಕಿನ ಲೋಕೋಪಯೋಗಿ ಇಲಾಖೆ ರಸ್ತೆಗಳ ದುರಸ್ತಿ ಹಾಗೂ ಅಭಿವೃದ್ಧಿಗಾಗಿ ರೂ. 31.00 ಲಕ್ಷಗಳನ್ನು ಒದಗಿಸಲಾಗಿದೆ. ಈ ಅನುದಾನಕ್ಕೆ ಕಾರ್ಯಕ್ರಮ ಪಟ್ಟಿ ಅನುಮೋದನೆ ಆಗಿದ್ದು ದುರಸ್ಥಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ.

ಇ) ಸದರಿ ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿಯನ್ನಾಗಿ ಮೇಲ್ದರ್ಜೆಗೇರಿಸುವುದಕ್ಕೆ ಕೇಂದ್ರ ಸರ್ಕಾರಕ್ಕೆ ಶಿಪಾರಸ್ಸು ಮಾಡಲಾಗಿದೆ.

ಶ್ರೀ ಮಲೆಮಹದೇಶ್ವರ ಬೆಟ್ಟ - ಸೇಲಂ ರಸ್ತೆ ರಿಪೇರಿ

358 - ಶ್ರೀ ಹೆಚ್. ನಾಗಪ್ಪ (ಹನೂರು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಳ್ಳೆಗಾಲ ತಾಲ್ಲೂಕಿಗೆ ಸೇರಿದ ಶ್ರೀ ಮಲೆಮಹದೇಶ್ವರ ಬೆಟ್ಟಕ್ಕೆ ಸೇಲಂನಿಂದ ಬರುವ ರಸ್ತೆ ಮಳೆಯಿಂದ ಬೆಟ್ಟವು ಕುಸಿದು ಬಂಡೆಗಳು ರಸ್ತೆಗೆ ಬಿದ್ದು ಸಂಚಾರವು ಪೂರ್ಣ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;